

೬

ಕಲೆಯುವ ಕಲೆ....

# ಸುಂದರಬನ

ಶಿಕ್ಷಕರು/ಮಕ್ಕಳು/ಪಾಲಕರಲ್ಲಿ ನಿವೇದನೆ:
'ಸುಂದರಬನ'ದಲ್ಲಿ ಸುಂದರ ಕಲಿಕಾ ಅನುಭವ ಪಡೆಯಲು ಆಯಾ ಪುಟಗಳಲ್ಲಿ ಕೊಟ್ಟಿರುವ 'ನಮ್ಮ ಆಶಯ'ವನ್ನು ತಾವು ಗಮನಿಸಿ. ಆ ಪ್ರಕಾರ ಚಟುವಟಿಕೆಗಳನ್ನು ಮಾಡಿರಿ/ಮಾಡಿಸಿರಿ.

ಹೆಸರು:..........................................................................

ಶಾಲೆ:..........................................................................

ಫೋಟೋ: ಗಂಗಾಧರ ಕೆ.ಜಿ, ಧ್ವ ಬಳಗ

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre

ನವೆಂಬರ್ – ಡಿಸೆಂಬರ್ ೨೦೨೪–೨೫

ಪೂರಣ ಯೋಜನೆ
Poorana 2024-25 Project is Supported by Many Individual Donors

# ಎಲೆ - ಕಲೆ





ಮುಕ್ತ ಕಲಿಕೆಗಾಗಿ





ಎಲೆಯಲ್ಲಿ ಪಕ್ಷಿಯನ್ನು ಮಾಡುವ ವಿಡಿಯೋ ನೋಡಲು ಇಲ್ಲಿರುವ QR ಕೋಡ್ ಅನ್ನು ಸ್ಕ್ಯಾನ್ ಮಾಡಿ.

**ನಮ್ಮ ಆಶಯ:** ಮೇಲಿನ ಚಿತ್ರಗಳನ್ನು ಗಮನಿಸು. ದಿನನಿತ್ಯದಲ್ಲಿ ಸಿಗುವ ವಿವಿಧ ಎಲೆಗಳಲ್ಲಿ ವಿವಿಧ ಪ್ರಾಣಿಗಳನ್ನು ಅರಳಿಸಿದ್ದಾರೆ. ಈ ಬಹಳ ಸೂಕ್ಷ್ಮ ಕೆಲಸ. ಜೊತೆಗೆ ಹೆಚ್ಚು ತಾಳ್ಮೆ ಬೇಕಾಗುತ್ತದೆ. ನೀನು ಸಹ ಸುಲಭವಾಗಿ ಎಲೆಗಳಲ್ಲಿ ಯಾವುದಾದರೂ ಪ್ರಾಣಿ ಅಥವಾ ಪಕ್ಷಿಯನ್ನು ಅರಳಿಸು. ನೀನ್ನ ಅನುಭವನ್ನು ಹಂಚಿಕೊ. ಧ್ವನಿಗೆ ಫೋಟೋ ತೆಗೆದು ಕಳಿಸು.

# ದೀಪಾವಳಿ ಹಬ್ಬದ ಶುಭಾಶಯಗಳು

## ದೀವಳಿಗೆಯ ಹಬ್ಬ

ಹಬ್ಬವು ಬಂದಿತು ಹಿಗ್ಗನು ತಂದಿತು
ಬಂದಿತು ದೀವಳಿಗೆಯ ಹಬ್ಬ
ಮನೆ ಮನೆಯಲ್ಲಿ ಮನ ಮನದಲ್ಲಿ
ಹಚ್ಚಿತು ದೀಪಗಳನು ಹಬ್ಬ

ಅಂದದ ಹಬ್ಬ ಚೆಂದದ ಹಬ್ಬ
ಹಬ್ಬಗಳಲ್ಲಿ ಇದು ಹಿರಿ ಹಬ್ಬ
ಆ ಎಡೆ ಈ ಎಡೆ ನೋಡಿದೆ ಎಡೆಯಲಿ
ದೀಪಗಳನು ಬೆಳಗುವ ಹಬ್ಬ

ಬಣ್ಣ ಬಣ್ಣದ ಕಾಗದದಿಂದ
ಶಿವನ ಬುಟ್ಟಿ ರಚಿಸುವ ಹಬ್ಬ
ಶಿವನ ಬುಟ್ಟಿಯಲಿ ದೀಪವನಿಟ್ಟು
ತೂಗ ಬಿಡುವ ಹರುಷದ ಹಬ್ಬ

ಅಂಗಡಿಗಳಲಿ ಲಕ್ಷ್ಮಿಯ ಪೂಜೆಯ
ಸಿಂಗರದಲಿ ನಡೆಸುವ ಹಬ್ಬ
ಎಲ್ಲರ ಮುಖವನು ಹೂವಿನ ತೆರದೊಳು
ಅರಳಿಸುತ್ತ ಬಂದಿತು ಹಬ್ಬ

ಬೆಳಗುವ ಹಬ್ಬ ತೊಳಗುವ ಹಬ್ಬ
ಬಂದಿತು ದೀವಳಿಗೆಯ ಹಬ್ಬ
ಎಲ್ಲರ ಹಣೆಯಲಿ ತಿಲಕವನಿಟ್ಟು
ಉಲ್ಲಾಸವ ಬೀರುವ ಹಬ್ಬ



ಸಾಂದರ್ಭಿಕ ಚಿತ್ರ

**ಆಕರ: ತನನ ತೋಂ ಮಕ್ಕಳ ಪದ್ಯಗಳು**
**ಡಾ॥ ಡಿ.ಎಸ್. ಕರ್ಕಿ**

**ನಮ್ಮ ಆಶಯ:** ಇಲ್ಲಿ ಕೊಟ್ಟಿರುವ ಚಿತ್ರ ಮತ್ತು 'ದೀಪಾವಳಿ ಹಬ್ಬ' ಪದ್ಯವನ್ನು ಗಮನಿಸು. ಅನಂತರ ನೀನು ಅಥವಾ ನಿನ್ನ ಸ್ನೇಹಿತರು ಆಚರಿಸಿದ ದೀಪಾವಳಿ ಹಬ್ಬದ ಕುರಿತು ಎಂಟು-ಹತ್ತು ವಾಕ್ಯ ಬರೆ.

| ಭಾಷಾ ಚೌಕ |
| --- |
| **ಮಣ್ಣಿನ ಹಣತೆ - Earthen Lamp** (ಅರ್ತನ್ ಲ್ಯಾಂಪ್) |
| **ಪಟಾಕಿ - Cracker** (ಕ್ರ್ಯಾಕರ್) |
| **ತೋರಣ - Swag** (ಸ್ವ್ಯಾಗ್) |

# ಜಾಲದಾಟ







'ಕರ್ನಾಟಕದಲ್ಲಿ ಸಾರಿಗೆ ವ್ಯವಸ್ಥೆ' ಭೂಗೋಲ ಪಾಠಕ್ಕೆ ಪೂರಕ

**ನಮ್ಮ ಆಶಯ:** ಕೊಟ್ಟಿರುವ ರೈಲು ಮತ್ತು ಹೆಲಿಕಾಪ್ಟರ್ ಜಾಲದಾಟಗಳನ್ನು ಗಮನಿಸು. ಇವುಗಳಲ್ಲಿ ಒಳಗೆ ಹೋಗಿ ಹೊರಗೆ ಬರಲು ಎಷ್ಟೆಷ್ಟು ಸಮಯ ತೆಗೆದುಕೊಂಡೆ ಗಮನಿಸು. ನಂತರ ಕರ್ನಾಟಕದಲ್ಲಿನ ಸಾರಿಗೆ ವ್ಯವಸ್ಥೆ ಕುರಿತು ಮಾತನಾಡು.

# ಜನಪದ ಕಲೆಗಳ ವೈಭವ







## ಗೀಗೀ ಪದ

ಹರಹರಾ.. ಹರಾ
ಅರೆ ಗೀಯ ಗೀಯ ಗಾಗೀಯ ಗೀಯ
ಗೀಯ ಗೀಯ ಗಾಗೀಯ ಗೀಯ
ನಾವು ಬಂದೇವ ನಾವು ಬಂದೇವ
ನಾವು ಬಂದೇವ ಶ್ರೀಶೈಲ ನೋಡೊದಕ್ಕ
ಸ್ವಾಮಿ ಸೇವಾ ಮಾಡಿ ಮತ್ತು ಹೋಗದಕ್ಕ
ಅರೆ ಗೀಯ ಗೀಯ ಗಾಗೀಯ ಗೀಯ ॥ಪ॥

ಏ... ಬೆಟ್ಟದ ಮೇಲೆ ಏರಿ ಶಿವ ಯಾಕೆ ಕುಂತ
ಅವನಿಗೇನು ಬಂತ
ಅಂಥಾದ್ದವನಿಗೇನು ಬಂತ
ಹೂಂ... ಹೇಳಪ್ಪಾ...?
ಕೆಟ್ಟ ಜನರ ಮುಖ ನೋಡಬಾರದಂತ...
ಗೀಯ ಗೀಯ ಗಾಗೀಯ ಗೀಯ
ಗೀಯ ಗೀಯ ಗಾಗೀಯ ಗೀಯ ॥

ಏ... ಹಣ್ಣು ಕಾಯಿ ಧೂಪ ದೀಪ ಇಡತಾರಂತ
ಯಾಕಂತ... ?
ಪುಣ್ಯ ಬರಲಿ ಅಂತ
ಕಾಸಿನೊಳಗ ಕೋಟಿ ಪುಣ್ಯ ಬರಲಿ ಅಂತಾ....
ಗೀಯ ಗೀಯ ಗಾಗೀಯ ಗೀಯ ॥

ಏ... ಭಿಕ್ಷುಕ ಬಂದರೆ ನಿಷ್ಠೂರವಾಗಿ ಹೇಳತಾರಂತ
ಏನಂತ...?
ಮುಂದಕ್ಕ ಹೋಗಂತ
ಈಗಾಗೊದಿಲ್ಲ ಮುಂದಕ್ಕ ಹೋಗಂತ
ಬೆಟ್ಟ ಏರಿ ಬಂದಿದ್ರು ಕೆಟ್ಟ ಗುಣ ಹೋಗಲಿಲ್ಲ
ಹುಟ್ಟು ಗುಣ ಸುಟ್ಟಾರು ಹೋಗದಂತಾ...
ಗೀಯ ಗೀಯ ಗಾಗೀಯ ಗೀಯ ॥



ಏ... ಬಾಯಿದ್ರೂ ಮೂಕನಾಗಿ
ಕಿವಿಯಿದ್ರೂ ಕಿವುಡನಾಗಿ
ಶಿವಾ ಯಾಕೆ ಕುಂತ
ಹೇಳಪ್ಪಾ...?
ವರ ಕೇಳತಾರಂತ...
ಗೀಯ ಗೀಯ ಗಾಗೀಯ ಗೀಯ ॥

ಏ ಶಿವನ ಒಲಿಸದಕ್ಕ ಏನು ಮಾಡಬೇಕ
ಹೂಂ... ಹೇಳಪ್ಪ...?
ಭಕ್ತಿಯೊಂದು ಸಾಕ
ನಮ್ಮಿಂದ ಶಿವನಿಗೇನು ಬೇಕಾ...
ಗೀಯ ಗೀಯ ಗಾಗೀಯ ಗೀಯ ॥

**ರಚನೆ:** ಶ್ರೀ ಮಹಾದೇವ ಬಣಕಾರ
**ಚಲನಚಿತ್ರ:** 'ಪಾಪ ಪುಣ್ಯ' (1971)
**ಗಾಯನ:** ಪಿ. ನಾಗೇಶ್ವರ ರಾವ್ ಮತ್ತು ಸಂಗಡಿಗರು

ಕೊಟ್ಟಿರುವ ಗೀಗೀ ಪದವನ್ನು ಕು. ಮನೋಜವಂ ಆತ್ರೇಯ ಹಾಡಿದ್ದಾನೆ. ಅದನ್ನು ನೋಡಲು ಇಲ್ಲಿರುವ QR ಕೋಡನ್ನು ಸ್ಕ್ಯಾನ್ ಮಾಡಿ.

**ನಮ್ಮ ಆಶಯ:** ಮೇಲೆ ಕೊಟ್ಟಿರುವ ಚಿತ್ರಗಳನ್ನು ಗಮನಿಸು. ಅಲ್ಲಿ ಬಳಸಿರುವ ವಾದ್ಯಗಳ ಹೆಸರುಗಳು ಏನು? ಅವುಗಳನ್ನು ಯಾವ ಯಾವ ಸಂದರ್ಭದಲ್ಲಿ ಗಮನಿಸಿದ್ದೀಯಾ? ನಂತರ ಕೊಟ್ಟಿರುವ ಗೀಗೀ ಪದವನ್ನು ಗಮನಿಸು. ಅದನ್ನು ಹಾಡು. ಈ ಜನಪದ ಕಲೆಗಳ ಕುರಿತು ಮಾತನಾಡು.

# ಅಹೋಮ್ ರಾಜಮನೆತನ








**ನಮ್ಮ ಆಶಯ:** ಅಹೋಮ್ ರಾಜಮನೆತನ ಲಾಂಛನದ ರೇಖಾಚಿತ್ರ ಮತ್ತು ನಕ್ಷೆಯನ್ನು ಕೊಡಲಾಗಿದೆ. ಗಮನಿಸು. ಲಾಂಛನಕ್ಕೆ ಬಣ್ಣ ಹಚ್ಚು. ಈ ರಾಜಮನೆತನ ವಿಶೇಷತೆಗಳ ಕುರಿತು ಎಂಟು–ಹತ್ತು ಸಾಲು ಬರೆ. ಸಹಾಯಕ್ಕಾಗಿ ಶಿಕ್ಷಕರ ಸಹಾಯ ಪಡೆ. ಇನ್ನೂ ಹೆಚ್ಚಿನ ಮಾಹಿತಿಯ ಅಗತ್ಯವಿದ್ದರೆ ಧ್ವನಿಯನ್ನು ಸಂಪರ್ಕಿಸು.

| ಭಾಷಾ ಚೌಕ |
| --- |
| ಲಾಂಛನ – **Emblem** (ಎಂಬ್ಲಮ್) |
| ಸಾಮ್ರಾಜ್ಯ – **Empire** (ಎಂಪೈರ್) |

# ಮಂಡಲ ಕಲೆ



ಮಿಥು ಕಲೆಗಾರಿ

'ಮಂಡಲ ಕಲೆ'ಯನ್ನು ಹೇಗೆ ಬಿಡಿಸುವುದು? ಎಂಬುದರ ವಿಡಿಯೋವನ್ನು ನೋಡಲು ಇಲ್ಲಿರುವ QR ಕೋಡನ್ನು ಸ್ಕ್ಯಾನ್ ಮಾಡಿ ನೋಡಿ.

**ನಮ್ಮ ಆಶಯ:** ಕೊಟ್ಟಿರುವ ಮಂಡಲ ಕಲೆಯನ್ನು ಸೂಕ್ಷ್ಮವಾಗಿ ಗಮನಿಸು. ತೆಳುವಾಗಿ ಬಣ್ಣ ಹಚ್ಚು. ನಂತರ ಬೇರೊಂದು ಹಾಳೆಯಲ್ಲಿ ತ್ರಿಜ್ಯ / ಕೈವಾರ ಬಳಸಿ ನೀನೊಂದು ಮಂಡಲ ಕಲೆ ಅರಳಿಸಿ, ಬಣ್ಣ ಹಚ್ಚು. ನಿನಗಾದ ಅನಿಸಿಕೆಗಳನ್ನು ಬಣ್ಣ ಹಚ್ಚುತ್ತಿರುವಾಗಲೇ ಗಮನಿಸು.

**ಭಾಷಾ ಚೌಕ**

ಪರಿಧಿ - **Circumference** (ಸರ್ಕಂಫ಼ರನ್ಸ್)
ಕಂಸ - **Bracket** (ಬ್ರ್ಯಾಕಿಟ್)
ವರ್ತುಲ/ವೃತ್ತ - **Circle** (ಸರ್ಕಲ್)

# ಕಕೂಮಾ ಆಟ

- ಡಾ. ಗಣನಾಥ ಎಸ್. ಎನ್.
ಸುವಿದ್ಯಾ, ಮೈಸೂರು

ಇದೊಂದು ಜಪಾನ್ ಮೂಲದ ವಿಶಿಷ್ಟ ಆಟ.

ಇಲ್ಲಿ ಅನೇಕ ಪಂಚಭುಜಾಕೃತಿಗಳಿವೆಯಲ್ಲವೇ? ಅವುಗಳಲ್ಲಿ ಒಂದನ್ನು ಆರಿಸಿಕೊಳ್ಳಿ. ಅದರಲ್ಲಿ ಐದು ಸಂಖ್ಯೆಗಳಿವೆ. ಅವುಗಳನ್ನು ಕೂಡುತ್ತಾ ಹೋಗಿ. ಬಂದ ಉತ್ತರ ಅದೇ ಪಂಚಭುಜಾಕೃತಿಯಲ್ಲಿ ಇದೆಯೇ ಎಂದು ಗಮನಿಸಿ. ಒಂದು ಸಂಖ್ಯೆ ಮಾತ್ರ ಈ ರೀತಿ ಇರುತ್ತದೆ. ಅದನ್ನು ಗುರುತು ಮಾಡಿಕೊಳ್ಳಿ. ಹೀಗೆ ಐದು ಪಂಚಭುಜಾಕೃತಿಗಳಿಗೂ ಮಾಡಿ. ಆಗ ಐದು ಸಂಖ್ಯೆಗಳನ್ನು ಗುರುತಿಸಿರುತ್ತೀರಿ. ಅವುಗಳನ್ನು ಬಳಸಿ ಮೇಲಿನ ಸೂಚನೆಯಂತೆ ಮಾಡಿ. ಆಗ ಕಡೆಯಲ್ಲಿ ಒಂದೇ ಸಂಖ್ಯೆ ಉಳಿಯುತ್ತದೆ.

ಅದೇ ಉತ್ತರ. ಅದನ್ನು ಕಂಡುಹಿಡಿಯಲು ಸಾಧ್ಯವೇ?

ಮುಕ್ತ ಕಲಿಕೆಗಾಗಿ



# ಮತ್ತಷ್ಟು ಕಕೂಮಾ ಆಟಗಳು


















# ಕಂಡುಕೊಳ್ಳುವ ಸಮಯ



– ಧ್ವನಿ ಪೋಟೋ

**ನಮ್ಮ ಆಶಯ:** ತಾಜ್‌ಮಹಾಲಿನಂತೆ ಕಾಣುವ ಈ ಸ್ಮಾರಕವು ನಿಜಕ್ಕೂ ತಾಜ್‌ಮಹಲ್ ಅಲ್ಲ! ಹಾಗಾದರೆ, ಈ ಸ್ಮಾರಕದ ಹೆಸರು ಏನು? ಇದು ಯಾವ ಸ್ಥಳದಲ್ಲಿದೆ? ತಿಳಿದುಕೊ. ಸಹಾಯಕ್ಕಾಗಿ ಧ್ವನಿಯನ್ನು ಸಂಪರ್ಕಿಸಬಹುದು.

'ಮೊಗಲರು' ಚಿತ್ರಕಾರ ಮಾರ್ಕ್ ಪ್ಲೊರಕ್

# ಪೂರ್ಣದೆಡೆಗೆ-ನಡಿಗೆ



**ನಮ್ಮ ಆಶಯ:** ಕೊಟ್ಟಿರುವ ಅಪೂರ್ಣ ಸ್ಮಾರಕವನ್ನು ಪೂರ್ಣಗೊಳಿಸು. ಗುರುತಿಸು, ಬಣ್ಣ ಹಚ್ಚು. ಇದು ಯಾವ ರಾಜಮನೆತನಕ್ಕೆ ಸಂಬಂಧಿಸಿದೆ ಎಂಬುದರ ಕುರಿತು ಮಾತನಾಡು.

| ಭಾಷಾ ಚೌಕ |
| --- |
| **ಸಮಾಧಿ – Tomb** (ಟೂಂಬ್) |

# ಬಣ್ಣದಾಟ









**ನಮ್ಮ ಆಶಯ:** ಕೊಟ್ಟಿರುವ ಜನಪದ ಕಲೆಗಳ ರೇಖಾಚಿತ್ರಗಳಲ್ಲಿನ ವೇಷಭೂಷಣಗಳನ್ನು ಗಮನಿಸು. ಯಾವ ಯಾವ ಕಲೆಗಳು ಎಂಬುದನ್ನು ಗುರುತಿಸು. ಈ ಕಲೆಗಳ ಜನಪದ ಮಹತ್ವ ಕುರಿತು ಮಾತನಾಡು.

| ಭಾಷಾ ಚೌಕ |
|---|
| **ವೇಷಭೂಷಣ – Costume** (ಕಾಸ್ಟ್ಯೂಮ್) |
| **ಅಲಂಕಾರ – Decoration** (ಡೆಕೊರೇಷನ್) |
| **ಆಭರಣ – Ornament** (ಆರ್ನ್‌ಮೆಂಟ್) |
| **ಕಿರೀಟ – Crown** (ಕ್ರೌನ್) |

'ಜನಪದ ಕಲೆಗಳ ವೈಭವ' ಕನ್ನಡ ಪಾಠಕ್ಕೆ ಪೂರಕ

# ಶಿಶುನಾಳ ಶರೀಫ್ ಸಾಹೇಬ್

(1819-1889)



ಶಿಶುನಾಳ ಶರೀಫರು ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲೂಕಿನ 'ಶಿಶುನಾಳ' ಗ್ರಾಮದಲ್ಲಿ ಕ್ರಿ.ಶ. ೧೮೧೯ ಮಾರ್ಚ್ ೭ರಂದು ಜನಿಸಿದರು. ಇವರ ಪೂರ್ಣ ಹೆಸರು ಮಹಮ್ಮದ ಶರೀಫ್. ಇವರ ತಂದೆ ಇಮಾಮ್ ಹಜರತ್ ಸಾಹೇಬ್, ತಾಯಿ ಹಜ್ಜೂಮಾ. ಶರೀಫರ ಹೆಂಡತಿಯ ಹೆಸರು ಫಾತಿಮಾ.

ಶರೀಫರು ಮುಲ್ಕಿ ಪರೀಕ್ಷೆಯಲ್ಲಿ(ಆಗಿನ ಕಾಲದ ೭ನೇ ತರಗತಿ) ತೇರ್ಗಡೆ ಹೊಂದಿದ ಬಳಿಕ ಕೆಲವು ವರ್ಷ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕೆಲಸ ಮಾಡಿದರು. ಮುಂದೆ ಆಧ್ಯಾತ್ಮ ಚಿಂತನೆ ಹಾಗೂ ಸಾಧನೆಯ ಕಡೆಗೆ ಅವರ ಆಸಕ್ತಿ ಬೆಳೆಯಿತು. ಇದಕ್ಕೆ ಒತ್ತಾಸೆಯಾಗಿ ನಿಂತವರು ಗುರು ಗೋವಿಂದಭಟ್ಟರು.

ಗುರುಗಳ ಮಾರ್ಗದರ್ಶನದಲ್ಲಿ ಸಾಧನೆ ಮಾಡಿ ಜ್ಞಾನ ಪಡೆದ ಶರೀಫರು ಸಜ್ಜನರು, ಜ್ಞಾನಿಗಳು, ಜ್ಞಾನ ಬಯಸುವವರು ಮುಂತಾದವರೊಂದಿಗೆ ಸಂವಾದ ನಡೆಸುತ್ತಾರೆ. ಈ ಪ್ರಕ್ರಿಯೆಯಲ್ಲಿ ಅವರು ಅನೇಕ ತತ್ವಪದಗಳನ್ನು ರಚಿಸಿದರು. ಎಲ್ಲಾ ಜಾತಿ ಮತಗಳ ದೇವಾಲಯ – ಮಸೀದಿಗಳ ಸುತ್ತಾಟ ಹೆಚ್ಚು ಮಾಡಿದರು. ನವಲಗುಂದದ ನಾಗಲಿಂಗ ಯತಿ, ಗರಗದ ಮಡಿವಾಳಪ್ಪ, ಉಣಕಲ್ಲಿನ ಸಿದ್ಧಪ್ಪಜ್ಜ, ಹುಬ್ಬಳ್ಳಿಯ ಸಿದ್ಧಾರೂಢರು ಮುಂತಾದವರು ಶರೀಫರ ಸಮಕಾಲೀನರಾಗಿದ್ದರು. ಇವರೆಲ್ಲರೂ ತಮ್ಮ ಜ್ಞಾನದ ಆಧಾರದಲ್ಲಿ ಈ ಭಾಗದ ಜನರ ಹಾಗೂ ಸಮಾಜದ ಸುಧಾರಣೆಗೆ ತಮ್ಮನ್ನು ತಾವು ಒಡ್ಡಿಕೊಂಡಿದ್ದರು.

ಶರೀಫ್ ಸಾಹೇಬರು ಹಾಡಿದ ಪದಗಳು ಧಾರವಾಡ ಭಾಗದ ಆಡುಭಾಷೆಯ ಶೈಲಿಯಲ್ಲಿವೆ. ಈ ಪದಗಳಲ್ಲಿ ಕೆಲವು ದೇವತಾಸ್ತುತಿಯ ಪದಗಳಾದರೆ, ಇನ್ನು ಕೆಲವು ಪದಗಳು ತತ್ವಬೋಧನೆಯ ಪದಗಳಾಗಿವೆ. ಹೆಚ್ಚಿನ ಪದಗಳು ಕನ್ನಡದಲ್ಲಿ ಇದ್ದರೂ ಸಹ ಕೆಲವು ಪದಗಳು ಉರ್ದು ಭಾಷೆಯಲ್ಲಿವೆ.

## ಬಿದಿರು ನಾನಾರಿಗಲ್ಲಾದವಳು - ಚಟುವಟಿಕೆ 1

ಬಿದಿರು ನಾನಾರಿಗಲ್ಲಾದವಳು
ಹುಟ್ಟುತ ಹುಲ್ಲಾದೆ
ಬೆಳೆಯುತ ಮರವಾದೆ
ಸುಂದರ ಸ್ತ್ರೀಯರಿಗೆ ಕೇರುವ ಮೊರವಾದೆ

ಮುದುಕಗೆ ಬಡಿಗ್ಯಾದೆ
ಮುತ್ಯಾಗೆ ಬೆತ್ತವಾದೆ
ದೊಡ್ಡ ದೊಡ್ಡ ಮಹಾತ್ಮರ ಕೈಯೊಳಗೆ ಬೆತ್ತವಾದೆ

ಅಂಬಿಗಗೆ ಕೋಲಾದೆ
ದಂಡಿಗಿ ನಾನಾದೆ
ನೀಟುಳ್ಳ ಹುಡುಗರಿಗೆ ಬೇಟೆಯ ಬಡಿಗ್ಯಾದೆ

ಪಲ್ಲಕ್ಕಿ ದಂಡಿಗಿಯಾದೆ
ಪತ್ರಿಗೆ ಬುಟ್ಟಿಯಾದೆ
ಎಲ್ಲಮ್ಮನ ಗುಡ್ಡದೊಳಗೆ ಅಡ್ಲಿಗಿ ನಾನಾದೆ

ಹಂದರ ಹಾಲಗಂಬಾದೆ
ದಂಡಿಗೆ ಬಾಸಿಂಗಾದೆ
ದೊಡ್ಡ ದೊಡ್ಡ ಮಠದೊಳಗೆ ಕಜ್ಜಾಯ ಬುಟ್ಟಿಯಾದೆ

ತಿಪ್ಪೆಯ ಕೆಳಗಿದ್ದೆ
ಆದರುದ್ದ ಬೆಳದಿದ್ದೆ
ಸಿದ್ಧರಾಮೇಶ್ವರಗೆ ನಂದೀಯ ಕೋಲಾದೆ

ದೇಶದೊಳು ಶಿಶುನಾಳ
ಧೀಶನ ಮಠದೊಳಗೆ
ಸಾಧುರ ಕೈಯೊಳಗೆ ಏಕತಾರಿ ನಾನಾದೆ

'ಬಿದಿರು ನಾನ್ಯಾರಿಗಲ್ಲದವಳು' ತತ್ವಪದವನ್ನು ಪ್ರಸಿದ್ಧ ಜಾನಪದ ಗಾಯಕ ಶ್ರೀ ಪಿಚ್ಚಳ್ಳಿ ಶ್ರೀನಿವಾಸ್ ಅವರು ಹಾಡಿದ್ದಾರೆ. ಅದನ್ನು ಕೇಳಲು ಇಲ್ಲಿರುವ QR ಕೋಡ್ ಬಳಸು.

**ನಮ್ಮ ಆಶಯ:** ಮೊದಲಿಗೆ ಕೊಟ್ಟಿರುವ ಸಂತ ಶಿಶುನಾಳ ಶರೀಫ್ ಅವರ ಜನಪ್ರಿಯ ತತ್ವಪದ 'ಬಿದಿರು ನಾನಾರಿಗಲ್ಲದವಳು' ಅನ್ನು ಹಾಡು. ಅನಂತರ, ಅದರಲ್ಲಿ ಬರುವ ಬಿದಿರು ಸಾಮಗ್ರಿಗಳ ಹೆಸರುಗಳನ್ನು ಪಟ್ಟಿ ಮಾಡು. ಇವುಗಳ ರೇಖಾಚಿತ್ರಗಳನ್ನು ಮುಂದಿನ ಪುಟದಲ್ಲಿ ಬಿಡಿಸು. ಜೊತೆಗೆ, ತಮ್ಮ ತಮ್ಮ ಮನೆ, ಊರುಗಳಲ್ಲಿ ಬಳಕೆಯಲ್ಲಿರುವ ಬಿದಿರು ಸಾಮಗ್ರಿಗಳನ್ನೂ ಪಟ್ಟಿ ಮಾಡು. ಅವುಗಳ ರೇಖಾಚಿತ್ರಗಳನ್ನು ಬಿಡಿಸಿ ಬಣ್ಣ ಹಚ್ಚು. ಸಾಧ್ಯವಾದರೆ, ಇದೇ ಸಮಯದಲ್ಲಿ ನೀನೊಂದು ಸವಾಲು ಸ್ವೀಕರಿಸಬಹುದು. ಹೊಸದಾಗಿ ಪಟ್ಟಿ ಮಾಡಿರುವ ಬಿದಿರು ಸಾಮಗ್ರಿಗಳ ಹೆಸರುಗಳನ್ನು ಬಳಸಿಕೊಂಡು ಮೇಲಿನ 'ಬಿದಿರು ನಾನಾರಿಗಲ್ಲದವಳು' ತತ್ವಪದವನ್ನು ಮುಂದುವರೆಸಲು ಪ್ರಯತ್ನಿಸು.

| ಭಾಷಾ ಚೌಕ |
|---|
| ಬಿದಿರು – **Bamboo** (ಬ್ಯಾಂಬೂ) |
| ಮೊರ – **Dustpan** (ಡಸ್ಟ್‌ಪ್ಯಾನ್) |

# ಬಿದಿರು ನಾನಾರಿಗಲ್ಲಾದವಳು - ಚಟುವಟಿಕೆ 2

# ಮಕ್ಕಳ ದಿನಾಚರಣೆಯ ಶುಭಾಶಯಗಳು



ಸಾಂದರ್ಭಿಕ ಚಿತ್ರ

**ನಮ್ಮ ಆಶಯ:** ಪಕ್ಕದ ಚಿತ್ರದಲ್ಲಿ ಮಕ್ಕಳು ಯಾರೊಂದಿಗೆ ಇದ್ದಾರೆ ಎಂಬುದನ್ನು ಗುರುತಿಸು. ಬಣ್ಣ ಹಚ್ಚು. ನಿಮ್ಮ ಶಾಲೆಯಲ್ಲಿ ಆಚರಿಸಿದ ಮಕ್ಕಳ ದಿನದ ಕುರಿತು ಮಾತನಾಡು. ನಿನ್ನ ಆತ್ಮೀಯ ಗೆಳೆಯ-ಗೆಳತಿಯರ ಬಗ್ಗೆ ಒಂದು ಪತ್ರ ಬರೆದು ಧ್ವನಿಗೆ ಕಳುಹಿಸು.

# ಕೃಷಿಯ ಉಪಕರಣಗಳು




ಕೃಷಿಯ ಉಪಕರಣಗಳ ಮಾದರಿಗಳನ್ನು ಧ್ವನಿ ಶೈ.ಸಂ.ಕೇಂದ್ರಕ್ಕೆ ಸಿದ್ಧಪಡಿಸಿಕೊಟ್ಟವರು:
ಶ್ರೀ ಕರೆಗೌಡ ಶಿವನಗೌಡ ಲಿಂಗನಗೌಡ್ರ, ಬೆನಕನಕೊಂಡ, ತಾ: ರಾಣೆಬೆನ್ನೂರು, ಜಿ: ಹಾವೇರಿ

**ಭಾಷಾ ಚೌಕ**

**ನೇಗಿಲು – Plouh** (ಪ್ಲೌ)
**ಹೊಲ – Farm** (ಫಾರ್ಮ್)
**ಹಗ್ಗ - Rope** (ರೋಪ್)
**ಕೋಡು/ಕೊಂಬು – Horn** (ಹಾರ್ನ್)
**ನೊಗ – Yoke** (ಯೋಕ್)

**ನಮ್ಮ ಆಶಯ:** ಮೇಲಿನ ಚಿತ್ರಗಳನ್ನು ಗಮನಿಸು. ಡಿಸೆಂಬರ್ ತಿಂಗಳಲ್ಲಿ 'ರಾಷ್ಟ್ರೀಯ ರೈತ ದಿನಾಚರಣೆ' ಆಚರಿಸುತ್ತಾರೆ. ಯಾವ ದಿನ ಎಂದು ತಿಳಿದುಕೊ. ಧ್ವನಿಯಲ್ಲಿ ಸಂಗ್ರಹಿಸಿರುವ ಕೃಷಿ ಉಪಕರಣಗಳ ಮಾದರಿಗಳ ಫೋಟೋ ಕೊಟ್ಟಿದ್ದೇವೆ. ಅವುಗಳ ಹೆಸರುಗಳನ್ನು ತಿಳಿ. ಕೊನೆಯಲ್ಲಿ ಕೃಷಿಯ ಮಹತ್ವದ ಬಗ್ಗೆ ಮೆಲುಕು ಹಾಕು.

# ಮೆದುಳಿಗೆ ಮೇವು

| | | | | | |
|---|---|---|---|---|---|
| | X | | - | | 25 |
| + | ■ | - | ■ | + | |
| | / | | + | | 5 |
| - | ■ | + | ■ | - | |
| | - | | + | | 10 |
| 3 | | 10 | | -2 | |

**ಆಶಯ:** 1 ರಿಂದ 9ರ ವರೆಗಿನ ಸಂಖ್ಯೆಗಳನ್ನು ಬಳಸಿ ಇದರಲ್ಲಿನ ಅಡ್ಡ ಸಾಲು ಮತ್ತು ಕಂಬ ಸಾಲುಗಳಲ್ಲಿರುವ ಸಮೀಕರಣಗಳನ್ನು ಪೂರ್ಣಗೊಳಿಸು.

ಮುಕ್ತ ಕಲಿಕೆಗಾಗಿ

# ಬಣ್ಣದಾಟ



**ನಮ್ಮ ಆಶಯ:** ಇಲ್ಲಿನ ರೇಖಾಚಿತ್ರ ಯಾರದ್ದೆಂಬುದನ್ನು ಗುರುತಿಸು. ಖಾಲಿ ಜಾಗದಲ್ಲಿ ಇದನ್ನೇ ಬರೆಯಲು ಯತ್ನಿಸು. ಅವರ ಸಾಧನೆಯ ಕುರಿತು ಮಾತನಾಡು.

'ಮರಾಠರು' ಇತಿಹಾಸ ಪಾಠಕ್ಕೆ ಪೂರಕ

**ಭಾಷಾ ಚೌಕ**

ಪೇಟ/ರುಮಾಲು – **Turban** (ಟರ್ಬನ್)
ಗಾಂಭೀರ್ಯ – **Dignity** (ಡಿಗ್ನಿಟಿ)
ಮೀಸೆ – **Whisker** (ವಿಸ್ಕರ್)

# ಬಣ್ಣದಾಟ







**ನಮ್ಮ ಆಶಯ:** ಛತ್ರಪತಿ ಶಿವಾಜಿ ಮಹಾರಾಜನಿಗೆ ಸಂಬಂಧಿಸಿದ ಚಿತ್ರಗಳನ್ನು ಕೊಡಲಾಗಿದೆ. ಗಮನಿಸು. ಯಾವ ಯಾವ ಸನ್ನಿವೇಶಗಳು ಎಂಬುದನ್ನು ಗುರುತಿಸು. ನಂತರ ಸನ್ನಿವೇಶಗಳ ಕುರಿತು ಎಂಟು–ಹತ್ತು ಸಾಲು ಬರೆ.

| ಭಾಷಾ ಚೌಕ |
| --- |
| ಖಡ್ಗ – **Sword** (ಸೋರ್ಡ್) |
| ವರ – **Boon** (ಬೂನ್) |
| ದೇವಿ – **Goddess** (ಗಾಡೆಸ್) |
| ಉಪದೇಶ – **Advice** (ಅಡ್ವೈಸ್) |

# ಚೈತನ್ಯ ಮಹಾಪ್ರಭು

ಕ್ರಿ.ಶ. 1486- 1534



ಚೈತನ್ಯರ ಜನ್ಮಸ್ಥಳ ಬಂಗಾಳದ ನಾಡಿ(ನವದ್ವೀಪ) ಎಂಬ ದ್ವೀಪ.

ತಂದೆ ಜಗನ್ನಾಥ ಮಿಶ್ರ, ತಾಯಿ ಶಚಿದೇವಿ.

ಚೈತನ್ಯರ ಮೊದಲ ಹೆಸರು ವಿಶ್ವಂಭರ.





ಬಾಲಕ ಚೈತನ್ಯ ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಶಾಸ್ತ್ರಪಾಂಡಿತ್ಯ ಗಳಿಸಿದ್ದ. ಒಮ್ಮೆ ಗಯೆಗೆ ತಮ್ಮ ತಂದೆಯ ಶ್ರಾದ್ಧಕ್ಕಾಗಿ ಹೋದಾಗ ಅಲ್ಲಿನ ಮಾಧ್ವ ಸಿದ್ಧಾಂತಿ ಈಶ್ವರೀಪುರಿ ಅವರಿಂದ ಪ್ರಭಾವಿತನಾಗಿ ದೀಕ್ಷೆಯನ್ನು ಪಡೆದರು. ಅನಂತರ ಕೃಷ್ಣೋಪದೇಶ ಮಾಡಲು ತೊಡಗಿದರು. 'ಹರೇ ಕೃಷ್ಣ ಹರೇ ಕೃಷ್ಣ', ಕೀರ್ತನೆ ಹಾಡುತ್ತ, ನರ್ತನ ಮಾಡುತ್ತಾ ಸಂಚಾರ ಮಾಡಿದ.

ಒರಿಸ್ಸಾದ ರಾಜ ಗಜಪತಿರುದ್ರನ ಮಂತ್ರಿ ವಾಸುದೇವ. ಈತ ಚೈತನ್ಯರ ಅನುಯಾಯಿ ಆದ. ಚೈತನ್ಯರು ತಿರುಪತಿ, ಕಂಚಿ, ಶೃಂಗೇರಿ, ಉಡುಪಿ, ಗೋಕರ್ಣ ಮುಂತಾದ ಕ್ಷೇತ್ರಗಳಿಗೆ ಭೇಟಿ ನೀಡಿ, ಭಕ್ತಿಪ್ರಸರಣೆ ಮಾಡಿದರು. 'ಎಲ್ಲರೂ ದೇವರ ಮಕ್ಕಳು, ಮೇಲು ಕೀಳು ಭಾವ ಸಲ್ಲದು' ಎಂಬ ಸಂದೇಶವನ್ನು ತಮ್ಮ ಭಕ್ತಿಗೀತೆಗಳಲ್ಲಿ ಹಾಡುತ್ತ, ಜನರಲ್ಲಿ ಭಕ್ತಿಭಾವ ಬಿತ್ತಲು ಯತ್ನಿಸಿದರು. ಇವರು ಹಂಪಿಗೆ ಭೇಟಿ ನೀಡಿದ್ದರು ಎಂದು ಹೇಳಲಾಗಿದೆ.

**ಇಲ್ಲಿ ಚೈತನ್ಯರ ಚಿತ್ರ ಬಿಡಿಸಿರಿ.**



ಚೈತನ್ಯ
(ರೇಖಾಚಿತ್ರ)

ಚೈತನ್ಯರ ಒಂದೆರೆಡು ಬೋಧನೆಗಳನ್ನು ಇಲ್ಲಿ ಕೊಡಲಾಗಿದೆ ನೀನು ಇನ್ನಷ್ಟು ಮಾಹಿತಿ, ಅವರ ಇನ್ನೊಂದಿಷ್ಟು ಬೋಧನೆ ಸಂಗ್ರಹಿಸಿ ಇಲ್ಲಿ ಬರೆಯಿರಿ.

೧. ಶ್ರೀ ಕೃಷ್ಣನೇ ಪರಮಸತ್ಯ
೨. ಜೀವಾತ್ಮಗಳೆಲ್ಲವೂ ಭಗವಂತನ ಪ್ರತ್ಯೇಕಿಸಿದ ಭಾಗಗಳು

______________________________

______________________________

______________________________

______________________________

______________________________

______________________________

______________________________

______________________________

______________________________

______________________________

# ಗುರು ನಾನಕ್

ಕ್ರಿ.ಶ. 1469 - 1538



ಬಾಲಕ ನಾನಕ್



**ಗು**ರುನಾನಕ್ ಹುಟ್ಟಿದ್ದು ೧೪೬೯ ಏಪ್ರಿಲ್ ೧೫ರಂದು ಪಂಜಾಬಿನ ತಲವಂಡಿ ಗ್ರಾಮದಲ್ಲಿ. ತಂದೆ ಮೆಹತ್ ಕೌಲ್, ತಾಯಿ ತ್ರಿಪ್ತ. ಬಾಲ್ಯದಲ್ಲಿಯೇ ನಾನಕರಿಗೆ ಪಂಜಾಬಿ, ಹಿಂದಿ, ಸಂಸ್ಕೃತ, ಪರ್ಷಿಯ, ಪ್ರಾಕೃತ ಮುಂತಾದ ಭಾಷೆಗಳು ಬರುತ್ತಿದ್ದವು.

ಸಿಖ್ ಧರ್ಮದಲ್ಲಿನ ಹತ್ತು ಮಂದಿ ಗುರುಗಳ ಪೈಕಿ ಗುರುನಾನಕ್ ಮೊದಲನೆಯವರು. ಇವರ ಬೋಧನೆಗಳು ಸಿಖ್ಖರ ಧರ್ಮಗ್ರಂಥವಾದ 'ಗುರುಗ್ರಂಥ್ ಸಾಹಿಬ್'ನಲ್ಲಿ ಸಿಗುತ್ತವೆ.

ಇಲ್ಲಿ ಗುರುನಾನಕ್ ಚಿತ್ರ ಬಿಡಿಸಿರಿ.



**ಬೀದರ್‌ನಲ್ಲಿರುವ ಗುರುನಾನಕ್ ಝರ್ನಾ**



'ಭಕ್ತಿಪಂಥ' ಇತಿಹಾಸ ಪಾಠಕ್ಕೆ ಪೂರಕ

**ನಾನಕ್ ಹರಿದ್ವಾರದಲ್ಲಿದ್ದಾಗ ನಡೆದ ಘಟನೆ:**

ಗಂಗಾನದಿಯಲ್ಲಿ ಪೂರ್ವದಿಕ್ಕಿಗೆ ಮುಖಮಾಡಿ ಕೆಲವು ಜನ ನೀರು ಪ್ರೋಕ್ಷಣೆ ಮಾಡುತ್ತಿದ್ದರು. ಆಗ

| | |
|---|---|
| ನಾನಕ್ | : ಹೀಗೇಕೆ ಮಾಡುತ್ತಿದ್ದೀರಿ? |
| ಜನ | : ಪರಲೋಕದಲ್ಲಿರುವ ನಮ್ಮ ಹಿರಿಯರಿಗೆ ಇದು ಮುಟ್ಟಿ, ಅವರಿಗೆ ಶಾಂತಿ ಸಿಗುತ್ತದೆ. ಅದಕ್ಕೆ ಹೀಗೆ ಮಾಡುತ್ತಿದ್ದೇವೆ. |
| | ಆಗ ನಾನಕ್ ಪಶ್ಚಿಮದಿಕ್ಕಿನತ್ತ ಮುಖ ಮಾಡಿ ನೀರನ್ನು ಚಿಮುಕಿಸಲು ಆರಂಭಿಸಿದರು. |
| ಜನ | : ನೀವು ಹೀಗೇಕೆ ಮಾಡುತಿದ್ದೀರ? |
| ನಾನಕ್ | : ನಮ್ಮೂರಲ್ಲಿ ಮಳೆ ಆಗಿಲ್ಲ. ನಮ್ಮ ಹೊಲದ ಬೆಳೆ ಒಣಗುತ್ತಿದೆ. ಅದಕ್ಕೇ, ಈ ನದೀ ನೀರು ಅಲ್ಲಿಗೆ ಹೋಗಲಿ ಅಂತ. |
| ಜನ | : ನೀನೊಬ್ಬ ಹುಚ್ಚ ಇರಬೇಕು. ನೀನು ಚೆಲ್ಲಿದ ಈ ನೀರು ದೂರದಲ್ಲಿರುವ ನಿನ್ನ ಹೊಲಗಳಿಗೆ ಮುಟ್ಟುತ್ತದೆಯೇ? |
| ನಾನಕ್ | : ಯಾಕಾಗಬಾರದು? ನೀವು ಪ್ರೋಕ್ಷಣೆ ಮಾಡಿದ ನೀರು ಪರಲೋಕದಲ್ಲಿರುವ ನಿಮ್ಮ ಪಿತೃಗಳಿಗೆ ತಲುಪುವುದಾದರೆ, ಇಲ್ಲೇ, ಭೂಮಿಯಲ್ಲಿರುವ ನನ್ನ ಹಳ್ಳಿಯ ಹೊಲಕ್ಕೆ ಏಕೆ ತಲುಪಬಾರದು? |
| | ಜನಕ್ಕೆ ಆಗ ಅರಿವು ಮೂಡಿತು. ಅವರೆಲ್ಲ ನಾನಕರ ಶಿಷ್ಯರಾದರು. |

ಗುರುನಾನಕ್‌ರ ಒಂದೆರೆಡು ಬೋಧನೆಗಳನ್ನು ಇಲ್ಲಿ ಕೊಡಲಾಗಿದೆ. ನೀನು ಇನ್ನಷ್ಟು ಮಾಹಿತಿ, ಅವರ ಇನ್ನೊಂದಿಷ್ಟು ಬೋಧನೆ ಸಂಗ್ರಹಿಸಿ ಇಲ್ಲಿ ಬರೆಯಿರಿ.

೧. ವಿಗ್ರಹಾರಾಧನೆ, ಜಾತಿಭೇದ ಸಲ್ಲದು; ೨. ದುಡಿಮೆಯ ಬದುಕು ಭಗವಂತನಿಗೆ ಪ್ರಿಯವಾದದ್ದು; ೩. ಅಂಧ ಸಂಪ್ರದಾಯ ಕೂಡದು.

# ಚಿತ್ರ ಬರಹ...





ಮುಕ್ತ ಕಲಿಕೆಗಾಗಿ

**ನಮ್ಮ ಆಶಯ:** ಮೇಲಿನ ಚಿತ್ರಗಳನ್ನು ಗಮನಿಸು. ಚಿತ್ರಗಳಿಗೆ ಸೂಕ್ತವಾದ ಹೆಸರು ಕೊಡು. ನಂತರ ಚಿತ್ರಗಳ ಕುರಿತು ೭–೮ ಸಾಲು ಬರೆ.

# ಜಾಲದಾಟ




'ಕನ್ನಡದಲ್ಲಿ ಸಾರಿಗೆ ವ್ಯವಸ್ಥೆ' ಭೂಗೋಲ ಪಾಠಕ್ಕೆ ಪೂರಕ

**ನಮ್ಮ ಆಶಯ:** ಇಲ್ಲಿ ಕೊಟ್ಟಿರುವ ಹಾಯಿ ಹಡುಗು ಜಾಲದ ಒಳಗೆ ಹೋಗಿ ಹೊರಗೆ ಬರಲು ಮೂರು ನಿಮಿಷಗಳು ಮಾತ್ರ ಇದೆ. ನಂತರ ಸಾರಿಗೆ ವ್ಯವಸ್ಥೆಯಲ್ಲಿ ಹಡುಗಗಳ ಪಾತ್ರ ಏನು ಎಂಬುದರ ಕುರಿತು ಮಾತನಾಡು.

| ಭಾಷಾ ಚೌಕ |
| --- |
| ಹಾಯಿ ಹಡಗು – **Yaatch** (ಯಾಚ್) |

# ಇಂಗ್ಲೀಷ್ to ಕನ್ನಡ story

I once asked a very successful woman to share her secret with me.
She smiled and said to me..
“I started succeeding when I started leaving small fights for small fighters.
I stopped fighting those who gossiped about me..
I stopped fighting with my in laws..
I stopped fighting for attention..
I stopped fighting to meet public expectation of me..
I stopped fighting for my rights with stupid people..
I left such fights for those who have nothing else to fight..
And I started fighting for
My vision,
My dreams,
My ideas and
My destiny.
The day I gave up on small fights is the day
I started becoming successful.”
Some fights are not worth your time.
Choose what you fight for wisely.



ಭಾಷಾ ಕಲಿಕೆಗಾಗಿ

**ನಮ್ಮ ಆಶಯ:** ಮೇಲೆ ಕೊಟ್ಟಿರುವ ಇಂಗ್ಲೀಷ್ ಕಥೆಯನ್ನು ನಿಧಾನಕ್ಕೆ ಓದಿಕೊ. ಅರ್ಥ ಮಾಡಿಕೊ. ನಂತರ ಅದನ್ನು ಕನ್ನಡಕ್ಕೆ ರೂಪಾಂತರ ಮಾಡಿ ಬರೆ. ಸಹಾಯಕ್ಕಾಗಿ ಉತ್ತಮ ಇಂಗ್ಲೀಷ್ – ಕನ್ನಡ ನಿಘಂಟು ಬಳಸು. ರೂಪಾಂತರಿಸಿದ ಕಥೆಯನ್ನು ಧ್ವನಿಯ ವಾಟ್ಸಾಪ್ ನಂಬರ್ ಗೆ ಕಳಿಸು. ಅಗತ್ಯವಿದ್ದರೆ ಶಿಕ್ಷಕರು ಅಥವಾ ಹಿರಿಯರ ಸಹಾಯ ಪಡೆಯಬಹುದು.

# ಕಣ್ಣರಳಿಸಿ ನೋಡು

ಮುಕ್ತ ಕಲಿಕೆಗಾಗಿ




ಸಾಂದರ್ಭಿಕ ಕಲಿಕೆಗಾಗಿ



ಅರ್ಧ ಕಣ್ಣು ಮುಚ್ಚಿ ನೋಡು!

# ಕರ್ನಾಟಕದ ಪ್ರಮುಖ ಖನಿಜಗಳು

**ನಮ್ಮ ಆಶಯ:**
ಕರ್ನಾಟಕದಲ್ಲಿ ಕಂಡುಬರುವ ಪ್ರಮುಖ ಖನಿಜ ನಿಕ್ಷೇಪಗಳನ್ನು ತೋರಿಸುವ ಕರ್ನಾಟಕ ರೇಖಾನಕ್ಷೆಯನ್ನು ಕೊಡಲಾಗಿದೆ. ಗಮನಿಸು. ಸೂಚಿ ಪಟ್ಟಿಯ ಸಹಾಯದಿಂದ ಯಾವ ಯಾವ ಜಿಲ್ಲೆಗಳಲ್ಲಿ ಯಾವ ಯಾವ ಖನಿಜ ನಿಕ್ಷೇಪಗಳು ಕಂಡುಬರುತ್ತವೆ ಎಂಬುದನ್ನು ತಿಳಿದುಕೊ. ಅಲ್ಲಿಯೇ, ಆಯಾ ಜಿಲ್ಲೆಗಳ ಹೆಸರುಗಳನ್ನು ಬರೆ.




'ಕರ್ನಾಟಕದ ಖನಿಜ ಸಂಪನ್ಮೂಲಗಳು' ಭೂಗೋಳ ಪಾಠಕ್ಕೆ ಪೂರಕ

# ಕುಟ್ಟಿ ಮಾಡಿದ ರೇಖಾಚಿತ್ರಗಳು

**ನಮ್ಮ ಆಶಯ:** ಹಂಪಿಯಿಂದ ೧೨ ಕಿ.ಮೀ. ದೂರವಿರುವ ಪಾಪಿನಾಯಕನಹಳ್ಳಿಯ ಕರಿಗುಡ್ಡದ ಬಂಡೆಗಲ್ಲುಗಳಲ್ಲಿ ನೂರಾರು ಕುಟ್ಟು ರೇಖಾಚಿತ್ರಗಳು ಕಂಡುಂಬಂದಿರುವುದು ಇತ್ತೀಚೆಗೆ ನಡೆಸಿದ ಸಂಶೋಧನೆಯಿಂದ ತಿಳಿದುಬಂದಿದೆ. ಇವೆಲ್ಲವೂ ಆದಿಮಾನವರು ನೆಲೆಸಿರುವ ಕುರುಹು ಆಗಿದೆ.ಹಸು, ಜಿಂಕೆ, ಗೂಳಿ, ನಾಯಿ, ಹಂದಿ ಇತ್ಯಾದಿ ಕುಟ್ಟು ರೇಖಾಚಿತ್ರಗಳು ಕಂಡುಬಂದಿವೆ. ಮತ್ತಷ್ಟು ಮಾಹಿತಿ ಸಂಗ್ರಹಿಸು.





ಕೃಪೆ: www.prajavani.net

ಸಂಪರ್ಕ ಮಾಹಿತಿ:
ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬, ಪುಷ್ಪಾಂಜಲಿ
೩ನೇ ಅಡ್ಡರಸ್ತೆ, ಶಿವಗಿರಿ,
ಧಾರವಾಡ ೫೮೦ ೦೦೭
ಮೊ: ೯೯೮ ೬೬೬ ೧೦೫೫
dhwanitrust@gmail.com,
www.dhwanitrust.org

'ಧ್ವನಿ' ಶೈಕ್ಷಣಿಕ ಯೋಜನೆಗಳ ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಇಲ್ಲಿನ ಚಿತ್ರಗಳನ್ನು ಕೆಲವು ಅಂತರ್ಜಾಲ ತಾಣಗಳಿಂದ ಕೃತಜ್ಞತಾಪೂರ್ವಕವಾಗಿ ತೆಗೆದುಕೊಂಡು ಅಗತ್ಯಕ್ಕೆ ತಕ್ಕಂತೆ ಅಳವಡಿಸಿಕೊಳ್ಳಲಾಗಿದೆ.

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.